ಅಂದಿಲ್ಲ. ಮನೇಲಿರೋದು ನಾನೊಬ್ಬೇ ಎಲ್ರೂ ಊರಿಗೆ ಹೋಗಿದಾರೆ' ಎಂದವಳು ಧರಿತ್ರಿಯ ಸಿಡುಕು ಮಾತಿನತ್ತ ಗಮನವನ್ನೇ ಕೊಡದೆ ಗಾಡಿ ಸ್ಟಾರ್ಟ್ ಮಾಡಿದಳು.

ದಾರಿಯಲ್ಲಿ ಸಿಕ್ಕ ಹೋಟಲಲ್ಲಿ ಒಂದಿಷ್ಟು ಪಾರ್ಸಲ್ ಕಟ್ಟಿಸಿಕೊಂಡು ಫ್ಲಾಟ್ ತಲುಪಿದಾಗ ಏಳು ಗಂಟೆ. ಕಾತ್ಯಾಯಿನಿಯ ದೇಹಕ್ಕೆ ದಣಿವಾಗಿದ್ದರೂ ಮನಸ್ಸು ಉಲ್ಲಸಿತವಾಗಿತ್ತು. ತಾನೂ ಧರಿತ್ರಿಯಂತೆ ಯಾರನ್ನೂ ಕೇರ್ ಮಾಡದೆ ಪಾರ್ಟಿ, ಮೋಜು ಅಂತ ತಿರುಗಾಡಿದವಳೇ. ಅವರೆಲ್ಲರಂತೆ ಸಂಸಾರದ ಜಂಜಾಟ ಬೇಡ ಅಂತ ಲಿವಿಂಗ್ ಟುಗೆದರ್ ಸಂಬಂಧ ಇರಿಸಿಕೊಂಡು 'ಅವನ ಪಾಡಿಗೆ ಅವ... ನನ್ನ ಪಾಡಿಗೆ ನಾನು' ತಿರುಗಿ ಒಟ್ಟಿಗೆ ಇದ್ದು ಖುಷಿಯ ಬದುಕು ಕಟ್ಟಿಕೊಂಡವಳು ತಾನು. ಆದರೆ... ಈಗ? ತುಟಿಯರಳಿಸಿ ನಕ್ಕಳು. ನಾಳೆ ಉಡುವ ಸೀರೆ, ಒಡವೆ ಆರಿಸಿ ಎತ್ತಿಟ್ಟು ಸೋಫಾದಲ್ಲಿ ಒರಗಿದಳು. ಮಕ್ಕಳ ಗಲಾಟೆ, ಆಯಿಯ ಗದರುವಿಕೆ, ಅರವಿಂದನ ಮೆಲುಮಾತು ಯಾವುದೂ ಇಲ್ಲದೆ ಮನೆ ಭಣ ಭಣ ಎನಿಸಿತು. ಮೀಟಿಂಗ್ ಮುಗಿದಾಗಲೇ ಅರವಿಂದನ ಫೋನ್ ಬಂದಿತ್ತು. 'ಆಯಿ ಜೊತೆಗೆ ನನ್ನ ಇಬ್ಬರು ಸೋದರ ಮಾವಂದಿರು, ಒಬ್ಬ ಅತ್ತೆ ಬರ್ತಿದ್ದಾರೆ. ಕೆನಡಾದಲ್ಲಿರೋ ಅಣ್ಣ ತಿಂಗಳ ನಂತರ ಬರ್ತಾನಂತೆ. ನಾವು ಧಾರವಾಡದಿಂದ ಹೊರಟು ಬೆಳಿಗ್ಗೆ ಸುಮಾರು 7 ಗಂಟೆ ಹೊತ್ತಿಗೆ ಬರ್ತೀವಿ'

ಅರವಿಂದ... ಮನಸ್ಸು ಉಲ್ಲಸಿತವಾಯಿತು.

ಫೋನ್ ರಿಂಗಾಗಿ ಎತ್ತಿದಳು. ಅಮ್ಮನ

